# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ಚೌಕ, ಬೆಂಗಳೂರು-560 002**

**ಪತ್ರಿಕಾ ಪ್ರಕಟಣೆ** **ದಿನಾಂಕ:16.06.2020**

## ಪೂಜ್ಯ ಮಹಾಪೌರರು ರವರಿಂದ ಸ್ವಯಂಚಾಲಿತ ಕಾಂಪೋಸ್ಟಿಂಗ್ ಘಟಕ ಹಾಗೂ ಕಮಾಂಡ್ ಕಂಟ್ರೋಲ್ ಸೆಂಟರ್‌ಗೆ ಭೇಟಿ ನೀಡಿರುವ ಬಗ್ಗೆ:



ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರ ಎಲೆಕ್ಟ್ರಾನಿಕ್ಸ್ ಸಿಟಿ ಇಂಡಸ್ಟ್ರಿಯಲ್ ಟೌನ್‌ಷಿಪ್ ಅಥಾರಿಟಿ[Electronics City Industrial Township Authority-ELCITA] ವತಿಯಿಂದ ತಯಾರಿಸಿರುವ **"ಸ್ವಯಂಚಾಲಿತ ಕಾಂಪೋಸ್ಟಿಂಗ್ ಘಟಕ"** ಹಾಗೂ **"ಕಮಾಂಡ್ ಕಂಟ್ರೋಲ್ ಸೆಂಟರ್"**ಗೆ ಇಂದು ಪೂಜ್ಯ ಮಹಾಪೌರರು ರವರು ಭೇಟಿ ನೀಡಿ ತಪಾಸಣೆ ನಡೆಸಿದರು. ಈ ವೇಳೆ ಮಾನ್ಯ ಸ್ಥಳೀಯ ಶಾಸಕರು ಶ್ರೀ ಸತೀಶ್ ರೆಡ್ಡಿ ರವರು, ಮಾನ್ಯ ಉಪಮಹಾಪೌರರು ಶ್ರೀ ರಾಮಮೋಹನ ರಾಜು, ಅಧೀಕ್ಷಕ ಅಭಿಯಂತರರು ಶ್ರೀ ಬಸವರಾಜು ಕಬಾಡೆ, ELCITA ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ(CEO) ಶ್ರೀಮತಿ ರಮಾ.ಎನ್.ಎಸ್. ಹಾಗೂ ಇತರೆ ಅಧಿಕಾರಿಗಳು ಉಪಸ್ಥಿತರಿದ್ದರು.

ಎಲೆಕ್ಟ್ರಾನಿಕ್ಸ್ ಸಿಟಿ ಇಂಡಸ್ಟ್ರಿಯಲ್ ಟೌನ್‌ಷಿಪ್ ಅಥಾರಿಟಿ(ELCITA) ವತಿಯಿಂದ ನೂತನವಾಗಿ ಸ್ವಯಂಚಾಲಿತ ಕಂಪೋಸ್ಟಿಂಗ್ ಘಟಕಗಳನ್ನು ತಯಾರಿಸಿದ್ದು, ಅದನ್ನು ವಾರ್ಡ್ ಮಟ್ಟದಲ್ಲಿ ಬಳಕೆ ಮಾಡಿಕೊಳ್ಳುವಂತೆ ಪೂಜ್ಯ ಮಹಾಪೌರರು ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಸ್ವಯಂಚಾಲಿತ ಕಂಪೋಸ್ಟಿಂಗ್ ಘಟಕದಿಂದ ಸಾವಯವ ತ್ಯಾಜ್ಯವು 24 ಘಂಟೆಗಳಲ್ಲಿ ಗೊಬ್ಬರವಾಗಿ ಪರಿವರ್ತನೆಯಾಗಲಿದೆ. 50 ಕೆ.ಜಿ, 100 ಕೆ.ಜಿ, 500 ಕೆ.ಜಿ, 1 ಟನ್, 5 ಟನ್‌ಗಳ ಸಮಾರ್ಥ್ಯದ ಘಟಕಗಳನ್ನು ELCITA ತಯಾರಿಸಿದೆ. ತ್ಯಾಜ್ಯ ಸಂಸ್ಕರಣಾ ಘಟಕಗಳಲ್ಲಿ ಗೊಬ್ಬರವನ್ನಾಗಿ ಪರಿವರ್ತನೆ ಮಾಡಲು ಸಾಮಾನ್ಯವಾಗಿ ಒಂದು ತಿಂಗಳ ಕಾಲಾವಕಾಶ ಬೇಕಾಗುತ್ತದೆ. ಆದರೆ, ELCITA ತಯಾರಿಸಿರುವ ಘಟಕದಲ್ಲಿ ಶಾಖ ಉತ್ಪಾದಿತ ತಂತ್ರಜ್ಞಾನ[Heat Generated Technology] ಬಳಕೆ ಮಾಡಿ 24 ಘಂಟೆಯೊಳಗಾಗಿ ಗೊಬ್ಬರವನ್ನಾಗಿ ಮಾಡಬಹುದಾಗಿದೆ. ಆದ್ದರಿಂದ ವಾರ್ಡ್‌ಮಟ್ಟದಲ್ಲಿ ಹೆಚ್ಚು ಸಾವಯವ ತ್ಯಾಜ್ಯ ಉತ್ಪತ್ತಿ ಆಗುವ ಕಡೆ ಈ ಘಟಕಗಳನ್ನು ಬಳಸಿಕೊಳ್ಳುವಂತೆ ಮಹಾಪೌರರು ಅಧಿಕಾರಿಗಳಿಗೆ ಸೂಚನೆ ನೀಡಿದರು.

**ಕಮಾಂಡ್ ಕಂಟ್ರೋಲ್ ಸೆಂಟರ್:**

ELCITA ವತಿಯಿಂದ ಎಲೆಕ್ಟ್ರಾನಿಕ್ ಸಿಟಿಯಲ್ಲಿ ಕಮಾಂಡ್ ಕಂಟ್ರೋಲ್ ಸೆಂಟರ್ ನಿರ್ಮಿಸಿದ್ದು, ಆ ಮೂಲಕ ಒಂದೇ ಸ್ಥಳದಲ್ಲಿ ಘನತ್ಯಾಜ್ಯ ನಿರ್ವಹಣೆ, ಬೀದಿ ದೀಪ, ನೀರು, ಸಂಚಾರ ದಟ್ಟಣೆ, ಇ–ಆಡಳಿತ, ಸ್ಮಾರ್ಟ್ ಪಾರ್ಕಿಂಗ್ ಸೇರಿದಂತೆ ಇನ್ನಿತರ ಕಾರ್ಯವೈಖರಿಗಳ ಬಗ್ಗೆ ಒಂದೆಡೆ ಕೂತು ನಿಗಾವಹಿಸಬಹುದಾಗಿದೆ. ಅದೇ ಮಾದರಿಯಲ್ಲಿ ಪಾಲಿಕೆಯಲ್ಲೂ ಅಳವಡಿಸಿಕೊಳ್ಳಲು ಮಹಾಪೌರರು ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಈಗಾಗಲೇ ಬೆಂಗಳೂರು ಸ್ಮಾರ್ಟ್ ಸಿಟಿ ಲಿ. ವತಿಯಿಂದ ಕಮಾಂಡ್ ಕಂಟ್ರೋಲ್ ಸೆಂಟರ್ ಸ್ಥಾಪಿಸಲು ಕ್ರಮವಹಿಸಲಾಗುತ್ತಿದ್ದು, ಘನತ್ಯಾಜ್ಯ ನಿರ್ವಹಣೆ, ಬೀದಿ ದೀಪ ನಿರ್ವಹಣೆ, ಕಂದಾಯ, ನಗರ ಯೋಜನೆ, ರಸ್ತೆ ಕತ್ತರಿಸುವಿಕೆ, ಆರೋಗ್ಯ ನಿರ್ವಹಣೆ,  ನೀರು ಸರಬರಾಜು ಸೇರಿದಂತೆ ಎಲ್ಲವೂ ಒಂದೇ ಕಡೆ ಸಮಗ್ರ ಮಾಹಿತಿ ಸಿಗುವ ಹಾಗೆ ಯೋಜನೆ ರೂಪಿಸುವಂತೆ ಮಹಾಪೌರರು ಅಧಿಕಾರಿಗಳಿಗೆ ಸೂಚನೆ ನೀಡಿದ

**ಈ ವಿಷಯವನ್ನು ತಮ್ಮ ಮಾಧ್ಯಮದಲ್ಲಿ ಪ್ರಕಟಿಸಲು ಕೋರಿದೆ.**

**ಸಾರ್ವಜನಿಕ ಸಂಪರ್ಕಾಧಿಕಾರಿ**